# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ರವರ ಕಛೇರಿ

(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು–570 017
www.cescmysore.org

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ–ವಿಭಾಗ,
ಸೆಸ್ಕ್, ಆಲೂರು
ದೂ.ಸಂ. 081702–218233
E.Mail : aeealur@gmail.com

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/**ಆಲೂರು**/2018-19/1615-1617 ದಿನಾಂಕ : 11/10/18

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ–10.10.2018.ರ ಸೋಮವಾರ ದಂದು ಶ್ರೀಸುಚೇತನ್ ಅಧೀಕ್ಷಕ ಇಂಜಿನಿಯರ್ (ವಿ)ಹಾಸನರವರ ಅಧ್ಯಕ್ಷತೆಯಲ್ಲಿ ಆಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

1. ಶ್ರೀಸುಚೇತನ್ ಅಧೀಕ್ಷಕ ಇಂಜಿನಿಯರ್ (ವಿ) (ಪ್ರಭಾರಿ) ಹಾಸನ.
2. ಶ್ರೀ ಜಗದೀಶ್ ಕಾರ್ಯಪಾಲಕ ಇಂಜಿನಿಯರ್ (ವಿ)ಸಕಲೇಶಪುರ ವಿಭಾಗ
3. ಶ್ರೀ ರಂಗೇಗೌಡ ಎಮ್.ಬಿ. ಸ.ಕಾ.ಇಂ (ವಿ) ಆಲೂರು ಉಪವಿಭಾಗ
4. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ
5. ಶ್ರೀ ತೋಟಪ್ಪ, ಲೆಕ್ಕಾಧಿಕಾರಿ (ಆಂ.ಪ), ಸಕಲೇಶಪುರ ವಿಭಾಗ
6. ಶ್ರೀಮತಿ ಬಿಂದು ಸಹಾಯಕ ಇಂಜಿನಿಯರ್(ತಾಂತ್ರಿಕ) ಆಲೂರು ಉಪವಿಭಾಗ
7. ಶ್ರೀ ಅಬ್ದುಲ್, ಕಿರಿಯ ಇಂಜಿನಿಯರ್ (ವಿ) ಪಾಳ್ಯ ಶಾಖೆ.
8. ಶ್ರೀ ನಾಗರಾಜು ಕಿರಿಯ ಇಂಜಿನಿಯರ್ (ವಿ) ಆಲೂರು ಶಾಖೆ.
9. ಶ್ರೀ ಲಕ್ಷ್ಮೀಗೌಡ ಕಿರಿಯ ಇಂಜಿನಿಯರ್ (ವಿ) ಮಗ್ಗೆ ಶಾಖೆ.
10. ಕುಮಾರಿ.ಲಕ್ಷ್ಮೀ ಹಿರಿಯ ಸಹಾಯಕರು, ಕಂದಾಯ ಶಾಖೆ,ಆಲೂರು.

ಶ್ರೀ ಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ,ಸ್ವಾಗತಿಸುವ ಮೂಲಕ ಸಭೆಯನ್ನು 11:00 ಗಂಟೆಗೆ ಪ್ರಾರಂಭ ಮಾಡಿದರು.

---

**ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.**

1) ಶ್ರೀ ಮಹೇಶ್ ,ಮಾರನಾಯಕನಹಳ್ಳಿ ಗ್ರಾಮದಲ್ಲಿ ಗದ್ದೆ ಬದಿಯಲ್ಲಿ ಲೈನ್ ವೈರ ತುಂಬಾ ಬಾಗಿದ್ದು ಅಪಾಯದ ಸ್ಥಿತಿಯಲ್ಲಿದೆ, ಹಾಗೂ ಇದೇ ಮಾರ್ಗದಲ್ಲಿ 2 ಕಂಬವು ಕೂಡ ಶಿಥಿಲವಾಗಿದೆ, ಇದನ್ನು ಶೀಘ್ರವಾಗಿ ಬದಲಿಸಿ ಕೊಡುವಂತೆ ಕೇಳಿ ಕೊಂಡರು.

ಸಭೆಯ ಅಧ್ಯಕ್ಷರು ಆನೆ ಕಾರಿಡರ್ ಯೋಜನೆ ಅಡಿಯಲ್ಲಿ ಕೆಲಸ ನಿರ್ವಹಿಸುವಂತೆ ಸೂಚಿಸಿದರು.

2) ಆಲೂರು ಗ್ರಾಮಸ್ಥರು ಆಲೂರು ಕಸಬಾಕ್ಕೆ ವೋಲ್ಟೇಜ್ ಸಮಸ್ಯೆ ಇದ್ದು ಹೊಸ ವಿ.ವಿ.ಕೇಂದ್ರ ಸ್ಥಾಪಿಸುವಂತೆ ಮನವಿ ಮಾಡಿದರು.ಹಾಗು ಎಲ್ಲಾ ಶಾಖಾಧಿಕಾರಿಗಳು ಆಯಾ ಕೇಂದ್ರ ವ್ಯಾಪ್ತಿಯಲ್ಲಿ ವಾಸ್ತವ್ಯ ವಿರಲು ಕೋರಿದರು.

ಸಭೆಯ ಅಧ್ಯಕ್ಷರು ಹೊಸ ವಿ.ವಿ.ಕೇಂದ್ರ ಪ್ರಸ್ಥಾಪನೆಗೆ ಅನುಮೋದನೆ ದೊರಕಿರುತ್ತದೆ ಎಂದು ತಿಳಿಸಿದರು. ಶಾಖಾಧಿಕಾರಿಗಳಿಗೆ ಕೇಂದ್ರ ಸ್ಥಾನದಲ್ಲಿ ವಾಸಿಸಲು ಸೂಚಿಸಿದರು ಹಾಗು ಗ್ರಾಹಕರ ಸಮಸ್ಯೆಗಳಿಗೆ ತಕ್ಷಣ ಸ್ವಂದಿಸಲು ಸೂಚಿಸಿದರು.

3) ಶ್ರೀ ರಘು ಕರವೇ ಅಧ್ಯಕ್ಷರು ಪಾಳ್ಯ ಕೇಂದ್ರದಲ್ಲಿ ಕಂಬಗಳಿಗೆ ಹಬ್ಬಿರುವ ಬಳ್ಳಿಗಳನ್ನು ಕತ್ತರಿಸಲು ತಿಳಿಸಿದರು ಹಾಗೂ ಸರಿಯಾಗಿ ಕಾರ್ಯನಿರ್ವಹಣೆ ಮಾಡುವಂತೆ ಕೋರಿದರು

ಸಭೆಯ ಅಧ್ಯಕ್ಷರು ಎಲ್ಲಾ ಶಾಖಾಧಿಕಾರಿಗಳಿಗೆ ಕೂಡಲೇ ವಿದ್ಯುತ ಕಂಬಗಳಿಗೆ ಹಬ್ಬಿರುವ ಬಳ್ಳಿಗಳನ್ನು ಕತ್ತರಿಸಲು ಸೂಚಿಸಿದರು.

4) ಗೊಲ್ಲರತಿಮ್ಮನಹಳ್ಳಿ ಗ್ರಾಮಸ್ಥರು, ಜಿ.ಆರ್.ಕೃಷ್ಣೇಗೌಡ ರವರ ಜಮೀನಿನ ಮೇಲೆ ಹದು ಹೋಗಿರುವ ಲೈನ್ ಜೋತು ಬಿದ್ದಿದ್ದು ಯಾವ ಸಂದರ್ಭದಲ್ಲಾದರು ತುಂಡಾಗಿ ಬೀಳುವ ಸಾಧ್ಯತೆ ಇರುವುದರಿಂದ ಕೂಡಲೆ ಸರಿಪಡಿಸುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಆಲೂರು ಶಾಖಾಧಿಕಾರಿಗಳಿಗೆ ಕೂಡಲೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

5) ಶ್ರೀ ವೀರಭದ್ರಸ್ವಾಮಿ, ಭೈರಾಪುರ, 9964226746 ಎತ್ತಿನ ಹೊಳೆ ಯೋಜನೆಯ ಸ್ಥಳದಲ್ಲಿ 3 ಕಂಬಗಳನ್ನು ಸ್ಥಳಾಂತರಿಸಲು ಕೋರಿದರು.ಮತ್ತು ಅವರ 3 ಐ.ಪಿ.ಸ್ಥಾವರಗಳನ್ನು ಸಕ್ರಮ ಮಾಡಿಕೊಂಡಿದ್ದು ಹೊಸ ಪರಿವರ್ತಕ ಅಳವಡಿಸುವಂತೆಕೋರಿದರು.

ಸಭೆಯ ಅಧ್ಯಕ್ಷರು ಕಂಬಗಳನ್ನು ಸ್ಥಳಾಂತರಿಸಲು ಸ್ವಂತ ಕಾಮಗಾರಿ ಅಡಿಯಲ್ಲಿ ಸ್ಥಳಾಂತರಿಸಲು ಸೂಚಿಸಿದರು. ಹಾಗೂ ಹೊಸ ಪರಿವರ್ತಕವನ್ನು ಯು.ಎನ್.ಐ.ಪಿ ಯೋಜನೆ ಅಡಿ ಅಂದಾಜು ತಯಾರಿಸಲು ತಿಳಿಸಿದರು.

6) ಸೋಮಶೇಖರ್ ,ಹಿಡುವನಹಳ್ಳಿ ,9448544608 ರವರು ಪರಿವರ್ತಕ ಚಾಲನೆ ಮಾಡಲು Electrical Inspectorate charge ಸಕಲೇಶಪುರ ವಿಭಾಗೀಯ ಕಛೇರಿಯಿಂದ ಕಟ್ಟಿರುವುದಿಲ್ಲ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷರು ಚೆಕ್ ನೀಡುವಂತೆ ಸಕಲೇಶಪುರ ವಿಭಾಗೀಯ ಕಛೇರಿಗೆ ತಿಳಿಸಿದರು.

7) ಶ್ರೀ ರಂಗಮ್ಮ ಕೋ/ಂ ರಂಗಯ್ಯ ,ಮಗ್ಗೆ ರವರು ಗಂಗಾ ಕಲ್ಯಾಣ ಯೋಜನೆಯಲ್ಲಿ ಪ್ರತ್ಯೇಕ ಪರಿವರ್ತಕ ಅಳವಡಿಸಬೇಕ ಅಥವಾ ಸರ್ವಿಸ್ ಮೈನ್ ಯಿಂದ ವಿದ್ಯುತ್ ಸಂಪರ್ಕ ಪಡೆಯಬಹುದ ಎಂದು ಕೇಳಿದರು.

ಸಭೆಯ ಅಧ್ಯಕ್ಷರು ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿ ಅವಶ್ಯಕತೆ ಇದ್ದಲ್ಲಿ ಮಾತ್ರ ಪರಿವರ್ತಕವನ್ನು ಅಳವಡಿಸಲು ಅಂದಾಜು ಪಟ್ಟಿ ತಯಾರಿಸುತ್ತಾರೆ ಎಂದು ತಿಳಿಸಿದರು.

8) ನಾಗಯ್ಯ ಬಿನ್ ಈರಯ್ಯ,ಬೋಸ್ಮಾನಹಳ್ಳಿ ರವರು ಗಂಗಾ ಕಲ್ಯಾಣ ಯೋಜನೆಯಲ್ಲಿ ಪರಿವರ್ತಕ ಅಳವಡಿಸಿದ್ದು charge ಅಳವಡಿಸಿದ್ದು ಮಾಡಿರುವುದಿಲ್ಲ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷರು 15 ದಿನಗಳವೊಳಗೆ ಪರಿವರ್ತಕವನ್ನು charge ಮಾಡಲು ಶಾಖಾಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

9) ಶ್ರೀ ಜವರಯ್ಯ,ಕಾರಿಗನಹಳ್ಳಿ ರವರು 2002 ರಿಂದ ವಿದ್ಯುತ್ ಸಂಪರ್ಕ ಇಲ್ಲದಿರುವ ಬಗ್ಗೆ ತಿಳಿಸಿದರು.
ಸಭೆಯ ಅಧ್ಯಕ್ಷರು ದೀನ ದಯಾಳ್ ವಿದ್ಯುತ್ ಸಂಪರ್ಕ ನೀಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

10) ಶ್ರೀ ಗಣೇಶ ದೊಡ್ಡಕಣಗಾಲ್ ರವರು ಕುಡಿಯುವ ನೀರಿನ ಪರಿವರ್ತಕ ಸುಟ್ಟು ಹೋಗಿದ್ದು ಬದಲಾಯಿಸಿ ಕೊಡುವಂತೆ ತಿಳಿಸಿದರು.
ಸಭೆಯ ಅಧ್ಯಕ್ಷರು ಶಾಖಾಧಿಕಾರಿಗಳಿಗೆ ಪರಿವರ್ತಕ ಬದಲಾಯಿಸಿ ಕೊಡುವಂತೆ ತಿಳಿಸಿದರು.

11) ಶ್ರೀ ನಾಗರಾಜು ಮತ್ತು ಚಂದ್ರಶೇಖರ್ ಬೋಮ್ಮಚವಳ್ಳಿ ಪರಿವರ್ತಕ ಸುಟ್ಟು ಹೋಗಿದ್ದು ಬದಲಾಯಿಸಿ ಕೊಡುವಂತೆ ತಿಳಿಸಿದರು.
ಸಭೆಯ ಅಧ್ಯಕ್ಷರು ಅಕ್ರಮ ಐ.ಪಿ.ಸ್ಥಾವರಗಳನ್ನು ಸಕ್ರಮ ಮಾಡಿದ ನಂತರ ಪರಿವರ್ತಕ ಬದಲಾಯಿಸಿ ಕೊಡುವಂತೆ ತಿಳಿಸಿದರು.

12)ಪುಟ್ಟರಾಜು ಸೋಂಪುರ ರವರು ಯು.ಎನ್.ಐ.ಪಿ ಯೋಜನೆ ಅಡಿ ಅಂದಾಜು ತಯಾರಿಸಿದ್ದು ಕಾರ್ಯದೇಶ ಅಗಿರುವುದಿಲ್ಲ ತಿಳಿಸಿದರು.
ಸಭೆಯ ಅಧ್ಯಕ್ಷರು ಯು.ಎನ್.ಐ.ಪಿ ಯೋಜನೆಯಡಿ ಕಾರ್ಯದೇಶ ನೀಡುವ ವಿಭಾಗಿಯ ಕಛೇರಿಗೆ ಕ್ರಮ ವಹಿಸುವಂತೆ ಸೂಚಿಸಿದರು.

13)ಜಗದೀಶ ಚಿಕ್ಕಣಗಾಲು ರವರು ಯು.ಎನ್.ಐ.ಪಿ ಯೋಜನೆ ಅಡಿ ಪರಿವರ್ತಕ ಅಳವಡಿಸಲು ತಿಳಿಸಿದರು.
ಸಭೆಯ ಅಧ್ಯಕ್ಷರು ಯು.ಎನ್.ಐ.ಪಿ ಯೋಜನೆಯಡಿ ಕಾರ್ಯದೇಶ ನೀಡುವ ವಿಭಾಗಿಯ ಕಛೇರಿಗೆ ಕ್ರಮ ವಹಿಸುವಂತೆ ಸೂಚಿಸಿದರು.

ಸಭೆಯ ಅಧ್ಯಕ್ಷರು ಉಪವಿಭಾಗದ ಪ್ರಗತಿಯಲ್ಲಿರುವ **IPDS**, ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆ, ಗಂಗಾ ಕಲ್ಯಾಣ ಮತ್ತು **UNIP** ಯ ಪ್ರಗತಿಯ ಬಗ್ಗೆ ಚರ್ಚಿಸಿದರು.

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಿ/ ನೌಕರರುಗಳನ್ನು ವಂಧಿಸುವ ಮೂಲಕ ಸಭೆಯನ್ನು 2:00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

11/10

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪವಿಭಾಗ,ಸೆಸ್ಕ್,ಆಲೂರು.

<u>ಪ್ರತಿಗಳನ್ನು ಗೌರವಪೂರ್ವಕವಾಗಿ:-</u>

1) ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ,ಚಾ.ವಿ.ಸ.ನಿ.ನಿ. ಹಾಸನರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2) ಕಾರ್ಯಪಾಲಕ ಇಂಜಿನಿಯರ್ (ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ. ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3) ಲೆಕ್ಕಾಧಿಕಾರಿ (ಆಂ.ಪ) ಹಾಸನ ವಿಭಾಗ.
4) ಲೆಕ್ಕಾಧಿಕಾರಿ ಸಕಲೇಶಪುರ ವಿಭಾಗೀಯ ಕಛೇರಿ
5) ಶಾಖಾಧಿಕಾರಿಗಳು, ಆಲೂರು, ಮಗ್ಗೆ ಮತ್ತು ಪಾಳ್ಯ ಶಾಖೆ ರವರಿಗೆ
6) ಕಛೇರಿ ಪ್ರತಿ.